ಶ್ರೀ ಬಿ. ಬಸವಲಿಂಗಪ್ಪ.—ಇಂಥಾ ಭಾಗಗಳು ಅಭಾವ ಪೀಡಿತ ಪ್ರದೇಶ ಎಂದು ಸರ್ಕಾರದವರು ಡಿಕ್ಲೇರ್ ಮಾಡುವವರೆಗೂ ಕೂಡ ಲೋನ್ ಸ್ಯಾಪ್ ಮಾಡುವುದಕ್ಕಾಗುವುದಿಲ್ಲ. ನಾನು ೧ಳನೇ ತಾರೀಖು ಸ್ವತಃ ಹೋಗಿಬಿಟ್ಟು ಆ ಸ್ಥಳವನ್ನು ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇನೆ.

ಶ್ರೀ ಎಂ. ಮಾದಯ್ಯ.—ಸ್ವಾಮಿ, ಇವರು ತೆಗೆದುಕೊಂಡಿರತಕ್ಕಂಥಾ ಲೋನ್ ಅನ್ನು ರಿಕವರಿ ಮಾಡುವುದನ್ನು ಮುಂದಕ್ಕೆ ಹಾಕುಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು. —ಇಂಥಾ ಪ್ರದೇಶ ಅಭಾವ ಪೀಡಿತ ಪ್ರದೇಶ ಎಂದು ಡಿಕ್ಲೇರ್ ಮಾಡುವವರಿಗೂ ಕೂಡ ಲೋನ್ ಸ್ಯಾಪ್ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಮತ್ತು ನಾನು ಆ ಸ ಳವನ್ನು ನೋಡುತ್ತೇನೆ ಎಂದೂ ಕೂಡ ಹೇಳಿದ್ದಾರೆ ಆದುದರಿಂದ ತಾವು ದಯಮಾಡಿ ಕುಳಿತು ಕೊಳ್ಳಬೇಕು.

(iii) re : permission to private industrialists to transport blockdite

SRI G. RAJU GOWDA.—I call the attention of the Minister for Food and Forest to the lose of crores of Rupees to Government due to the permission given to the private industrialists to transport the blockdite.

ಶ್ರೀ ಜಿ. ರಾಮೇಗೌಡ (ಆಹಾರ ಹಾಗೂ ಅರಣ್ಯ ಮಂತ್ರಿಗಳು). —ಸ್ವಾಮಿ, ನನ್ನ ಹೇಳಿಕೆ ಈ ರೀತಿ ಇದೆ :—

ಕಪ್ಪು ಬಂಡೆ ಕಲ್ಲು ಒಂದು ಲಘು ಖನಿಜ. ೧೯೭೬ರವರೆಗೂ ಅರಣ್ಯ ಪ್ರದೇಶಗಳನ್ನೊಳಗೊಂಡಂತೆ ಅದರ ಗುತ್ತಿಗೆಯ ಆದೇಶಗಳನ್ನು ಖನಿಜ ಮತ್ತು ಭೂ ವಿಜ್ಞಾನ ಇಲಾಖೆಯವರು ನೀಡುತ್ತಿದ್ದರು. ಅರಣ್ಯ ಪ್ರದೇಶಗಳಲ್ಲಿರುವ ಲಘು ಖನಿಜ ಗುತ್ತಿಗೆಗಳನ್ನು ಅರಣ್ಯ ಸಂರಕ್ಷಣಾಧಿಕಾರಿಗಳೇ ಕೊಡುವಂತೆ. ಅವರಿಗೆ ಅಧಿಕಾರ ಕೊಟ್ಟು, ದಿನಾಂಕ ೫-೭-೧೯೭೬ರಂದು ನಿಯಮಗಳನ್ನು ತಿದ್ದುಪಡಿ ಮಾಡಲಾಯಿತು. ಖನಿಜ ಮತ್ತು ಭೂ ವಿಜ್ಞಾನ ಇಲಾಖೆಯವರು ಹಾಗೆ ಮಾಡಲು ಅವರಿಗೆ ಅಧಿಕಾರ ಇದ್ದಾಗ, ಅವರು ಕೊಳ್ಳೇಗಾಲ ವಿಭಾಗದಲ್ಲಿ ೪೧.೮೦ ಎಕರೆ ವಿಸ್ತೀರ್ಣದ ಪ್ರದೇಶಗಳನ್ನೊಳಗೊಂಡ ೬ ಗುತ್ತಿಗೆಗಳನ್ನು ಮಂಜೂರು ಮಾಡಿದರು. ಅನಂತರ ೧೯೫೬-೭೮ ಎಕರೆ ಪ್ರದೇಶಗಳನ್ನು ಆವರಿಸಿರುವ ೩೧ ಕಪ್ಪು ಬಂಡೆ ಕಲ್ಲುಗಳ ಗುತ್ತಿಗೆಗಳನ್ನು ಅರಣ್ಯ ಸಂರಕ್ಷಣಾಧಿಕಾರಿಗಳು ಕೊಳ್ಳೇಗಾಲ ವಿಭಾಗದಲ್ಲಿ ಮಂಜೂರು ಮಾಡಿದರು.

ಈ ಗುತ್ತಿಗೆಗಳಿಂದ ಒಟ್ಟು ೫೨,೩೭೧ ಟನ್ನು ಕಪ್ಪು ಬಂಡೆ ಕಲ್ಲುಗಳನ್ನು ತೆಗೆಯಲಾಯಿತು. ಈ ಬಗ್ಗೆ ವಸೂಲಾದ ರಾಜಾದಾಯ ೫೪,೯೩೬ ರೂಪಾಯಿ. ಹೀಗೆ ಬಂಡೆ ಕಲ್ಲನ್ನು ತೆಗೆಯುವುದರ ಪರಿಣಾಮವಾಗಿ ಮರಗಳ ಬೆಳವಣಿಗೆಯ ಸಂಬಂಧದಲ್ಲಿ ಆಗಿರುವ ಹಾನಿಯ ಬಗ್ಗೆ ಗುತ್ತಿಗೆದಾರರಿಂದ ವಸೂಲು ಮಾಡಿದ ಒಟ್ಟು ಮೊತ್ತ ೪೩,೬೬೨ ರೂಪಾಯಿ.

ಆಹಾರ ಮತ್ತು ಅರಣ್ಯಗಳ ಮಂತ್ರಿಗಳು ಕಪ್ಪು ಬಂಡೆ ಕಲ್ಲನ್ನು ತೆಗೆಯಲು ಗುತ್ತಿಗೆಗಳನ್ನು ಮಂಜೂರು ಮಾಡಿರುವುದರಿಂದ ಅರಣ್ಯಗಳ ಸಂಬಂಧವಾಗಿ ಕೋಟಿಗಟ್ಟಲೆ ರೂಪಾಯಿ ನಷ್ಟ ಸಂಭವಿಸಿವೆಯೆಂದು ಮಾನ್ಯ ಸದಸ್ಯರು ಸೂಚಿಸಿರುವುದು ನನಗೆ ಆಶ್ಚರ್ಯವುಂಟು ಮಾಡಿದೆ.

ಈಗಿನ ಮಂತ್ರಿ ಮಂಡಲವು ರಚನೆಯಾದ ನಂತರ ಕೊಳ್ಳೇಗಾಲ ವಿಭಾಗದಲ್ಲಿ ಯಾವ ಖಾಸಗಿ ಪಕ್ಷಗಳವರಿಗೂ ಗುತ್ತಿಗೆಯನ್ನು ಮಂಜೂರು ಮಾಡಿಲ್ಲ. ತದ್ವಿರುದ್ಧವಾಗಿ ನಾವು ಕೆಲವೊಂದು ಪ್ರದೇಶಗಳಲ್ಲಿ ಕಪ್ಪು ಬಂಡೆ ಕಲ್ಲುಗಳನ್ನು ಸರ್ಕಾರೀ ಏಜನ್ಸಿಗಳವರ ಪರವಾಗಿ ಕಾಯ್ದಿರಿಸುವ ಬಗ್ಗೆ ಯೋಚಿಸುತ್ತಿದ್ದೇವೆ. ನಾನು ಅಧಿಕಾರ ವಹಿಸಿಕೊಂಡ ತರುವಾಯ ಕಪ್ಪು ಬಂಡೆ ಕಲ್ಲಿನ ಬಗ್ಗಿನ ರಾಜಾದಾಯವನ್ನು ಟನ್ ಒಂದಕ್ಕೆ ೧೦ ರೂ. ನಿಂದ ರೂ. ೫೦ಕ್ಕೆ ಏರಿಸಬೇಕೆಂಬ ಅಭಿಲಾಷೆಯನ್ನು ಹೊಂದಿದ್ದೆ. ಈ ವಿಷಯ ಈಗ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಮಾನ್ಯ ಸದಸ್ಯರ ಹೇಳಿಕೆ ನಿರಾಧಾರವೆಂದು ಇನ್ನಾದರೂ ಅವರು ತಿಳಿದುಕೊಳ್ಳಬೇಕೆಂದು ನಾನು ಆಶಿಸುತ್ತೇನೆ.

ಶ್ರೀ ಸಿ ರಾಜೂಗೌಡ.—ಮಾನ್ಯ ಮಂತ್ರಿಗಳ ವಿವರಣೆಯಿಂದ ನನಗೆ ಕೆಲವು ಸಂಶಯಗಳು ಉದ್ಭವವಾಗಿರುವುದರಿಂದ ದಯವಾಡಿ ಆ ಸಂಶಯವನ್ನು ನಿವಾರಣೆ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಮೊದಲನೆಯದಾಗಿ ನನ್ನ ತಾಲ್ಲೂಕಿನಲ್ಲಿ ದೊರೆಯುತಕ್ಕಂಥಾ ಕಪ್ಪು ಬಂಡೆ ಕಲ್ಲು ಎಷ್ಟು ಎಂಬು ದನ್ನು ಅಂದಾಜು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಎರಡನೆಯದಾಗಿ ಈ ಕರಿಕಲ್ಲನ್ನು ಸಾಗಿಸಲು ಅನುಮತಿ ಕೊಡುವಾಗ ಅರಣ್ಯಾಧಿಕಾರಿಗಳು ಇದರ ಬಗ್ಗೆ ಒಂದು ಹೆಚ್ಚಿನ ತೊತ್ತಕ್ಕೆ ಭ್ರಷ್ಟಾಚಾರಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಮೂರನೆಯದಾಗಿ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಮಹದೇಶ್ವರ ಬೆಟ್ಟ, ಮಾಟರ ಹಳ್ಳಿ, ನಾಲ್‌ರೋಡ್, ಜಿಲ್ಲಿಪಾಳ್ಯ ಮತ್ತು ಮೀಣ್ಯ ಇವುಗಳಲ್ಲಿ ದೊರೆಯತಕ್ಕಂಥಾ ಕರಿಕಲ್ಲನ್ನು ತಾವು ಸಮೀಕ್ಷೆ ಮಾಡಿಸಿದ್ದೀರಾ ?

ನಾಲ್ಕನೆಯದಾಗಿ ಈ ಕರಿಕಲ್ಲಿನ ರಹದಾರಿಯನ್ನು ಯಾವ ಯಾವ ಖಾಸಗಿಯವರಿಗೆ ಎಷ್ಟೆಷ್ಟು ವರ್ಷದವರೆಗೆ ಲೈಸನ್ಸ್ ಕೊಟ್ಟಿದ್ದೀರಾ ಮತ್ತು ರಾಜ್ಯದ ಅರಣ್ಯಾಧಿಕಾರಿಗಳ ಸಂಬಂಧಪಟ್ಟವರಿಗೇ ನಾದರೂ ಯಾರಿಗಾದರೂ ಲೈಸನ್ಸ್ ಕೊಟ್ಟಿದ್ದೀರಾ ?

ಐದನೆಯದಾಗಿ ಅತಿ ಮುಖ್ಯವಾದ ವಿಷಯ ಏನೆಂದರೆ ಒಂದು ಕ್ಯೂಬಿಕ್ ಫೀಟ್‌ಗೆ ಒಂದು ಟನ್ ತೂಕದ ಕಲ್ಲಿಗೆ ೧೦ ರೂಪಾಯಿನಂತೆ ತೆಗೆದುಕೊಂಡು, ಬಾಂಬೆ ಮತ್ತು ಮದ್ರಾಸ್ ಇಂಥಾ ಕಡೆಗಳಲ್ಲಿ ರುವ ಬಂದರುಗಳಲ್ಲಿ ಟನ್ ಒಂದಕ್ಕೆ ೯೫೦ ರೂಪಾಯಿ ಮಾರಿ ಇದಕ್ಕೆ ಇನ್‌ಟರ್ನ್ ಆಗಿ ಟನ್ ಒಂದಕ್ಕೆ ೩೫೦ ರೂಪಾಯಿನಂತೆ ಜಪಾನ್ ಹೋಗಿ ಮಾರಾಟವಾಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಇಷ್ಟು ಕಡಿಮೆ ವೆಚ್ಚದಲ್ಲಿ ನಮ್ಮಲ್ಲಿ ಈ ಕರಿಕಲ್ಲನ್ನು ತೆಗೆದುಕೊಂಡು ಅಲ್ಲಿ ಅಧಿಕ ಲಾಭವನ್ನು ಸಂಪಾದನೆ ಮಾಡಿ ಈ ಒಂದು ರಫ್ತು ಉದ್ಯಮದಿಂದ ನಮ್ಮ ದೇಶಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ ವಾಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಆರನೆಯದಾಗಿ ಈ ದೊಡ್ಡ ಬಂಡೆಕಲ್ಲನ್ನು ಉರುಳಿಸುವಾಗ ಅಲ್ಲಿ ಅರಣ್ಯ ಸಂಪತ್ತು ಹಾಳಾಗು ವುದಲ್ಲದೆ ಕೆಳಗಡೆಗೆ ಬಿದ್ದಿರುವ ಮಣ್ಣೆಲ್ಲಾ ಕೊಚ್ಚಿಕೊಂಡು ಹೋಗಿ ಜಮೀನಿನ ಮೇಲೆ ಬೀಳುವುದರಿಂದ ನೂರಾರು ವರ್ಷದಿಂದ ಬೆಳೆದಿರತಕ್ಕಂಥಾ ಕುರುಚಲ ಗಿಡಗಳು ಬೆಳೆಯುವುದಕ್ಕೆ ಅವಕಾಶವಿಲ್ಲದೆ ಅಲ್ಲಿ ಬೆಳೆದಿರತಕ್ಕಂಥಾ ಕುರುಚಲಗಿಡಗಳು ಹೋಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೆ ? ಮತ್ತು ಇದರಿಂದ ಆಗತಕ್ಕಂಥಾ ನಷ್ಟವನ್ನು ಸರ್ಕಾರದವರು ಏನಾದರೂ ಅಂದಾಜು ಮಾಡಿದ್ದೀರಾ ? ಇದರಿಂದ ಸೌದೆಗಿಡಗಳೂ ಕೂಡ ಹೋಗುವುದಿಲ್ಲವೇ ಮತ್ತು ಈ ಕಲ್ಲುಗಳನ್ನು ತಾವು ಹರಾಜು ಮಾಡುವುದಾದರೆ ಇದರಿಂದ ಕೋಟ್ಯಾಂತರ ರೂಪಾಯಿ ಆದಾಯ ಬರುವುದಿಲ್ಲವೇ. ಮತ್ತು ಇದಕ್ಕೆ ಕೇಂದ್ರ ಸರ್ಕಾರ ದವರ ಅನುಮತಿ ಪಡೆದು ತಮಿಳು ನಾಡಿನಲ್ಲಿ ರಾಷ್ಟ್ರೀಕರಣ ಮಾಡಿದ ಹಾಗೆ ಇಲ್ಲೂ ಕೂಡ ಇಂಥಾ ಗಣಿಗಳನ್ನು ರಾಷ್ಟ್ರೀಕರಣ ಮಾಡಿದ್ದೇ ಆದರೆ ಅದರ ಮೇಲ್ವಿಚಾರಣೆಗೆ ಒಂದು ಮಂಡಲಿಯನ್ನು ತಾವು ರಚನೆ ಮಾಡಿದ್ದೇ ಆದರೆ ಇದರಿಂದ ನಮಗೆ ಕೋಟ್ಯಾಂತರ ರೂಪಾಯಿ ವಿದೇಶೀ ವಿನಿಮಯವನ್ನು ಗಳಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ ಇದರ ಬಗ್ಗೆ ತಮಗೇನಾದರೂ ಮಾಹಿತಿಯಿಲ್ಲವೇ ಮತ್ತು ತಾವು ಒಂದು ಸಲ ಈ ಸದನದಲ್ಲಿ ಹೇಳಿದ್ದೀರಿ ಜನ ಮತ್ತು ಧನ ಈ ಅರಣ್ಯವನ್ನು ಪ್ರವೇಶಮಾಡದೇ ಹೋದರೆ ಈ ಅರಣ್ಯವನ್ನು ನಂದನವನವನ್ನಾಗಿ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದೀರಿ ? ಆದರ ಬಗ್ಗೆ ತಮ್ಮ ನಿರೂಪಣೆ ಏನು ಮತ್ತು ಇದರ ಬಗ್ಗೆ ತಾವು ಏನು ಉತ್ತರ ಹೇಳುತ್ತೀರಿ ಎನ್ನುವುದನ್ನು ನಾನು ತಿಳಿಯುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರು ಈ ಬಗ್ಗೆ ಅಗಾಧವಾದ ಪ್ರಶ್ನೆಗಳನ್ನು ಹಾಕಿ ಅದಕ್ಕೆ ಉತ್ತರವನ್ನು ಕೊಡಬೇಕೆಂದು ಕೇಳಿದ್ದಾರೆ. ಆದರೆ ನನ್ನ ಶಕ್ತಿ ಎಷ್ಟರವರೆಗೆ ಇದೆಯೋ ಅಷ್ಟನ್ನು ನನ್ನ ಗಮನದಲ್ಲಿಟ್ಟುಕೊಂಡು ನಾನು ಉತ್ತರ ಹೇಳುವುದಕ್ಕೆ ಪ್ರಯತ್ನಿಸುತ್ತೇನೆ.

ಮೊದಲನೆಯದಾಗಿ ಅಧಿಕಾರಿಗಳು ಲಂಚ ತೆಗೆದುಕೊಂಡು ಎನ್ನತಕ್ಕಂಥಾದ್ದಕ್ಕೆ ನಾನು ನೇರವಾಗಿ ಉತ್ತರ ಹೇಳಲಾರೆ. ಮತ್ತು ಸಂಬಂಧಪಟ್ಟವರಿಗೆ ಲೈಸನ್ಸ್ ಕೊಟ್ಟದ್ದಾರೆ ಅನ್ನುವ ವಿಚಾರದಲ್ಲಿ ಹೇಳುವುದಾದರೆ ಆ ಬಗ್ಗೆ ಸರ್ಕಾರದವರು ಒಬ್ಬರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದಾರೆ. ಆದುದರಿಂದ ಆ ವಿಚಾರ ಈಗ ಉದ್ಭವವಾಗುವುದಿಲ್ಲ.

ಇನ್ನು ಎರಡನೆಯದಾಗಿ ತಮಿಳುನಾಡಿನಲ್ಲಿ ನ್ಯಾಷನಲೈಸೇಷನ್ ಮಾಡಿರುವುದು ಗೊತ್ತು. ಆದೇ ರೀತಿ ಕರ್ನಾಟಕ ರಾಜ್ಯದಲ್ಲೂ ಕೂಡ್ಲೆಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರನ್ನು ಈ ಉದ್ಯಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅದರ ಕಾರ್ಯ ಈಗಾಗಲೇ ಪ್ರಾರಂಭ ಮಾಡಿದೆ. ಇದಕ್ಕೆ ಹಲವಾರು ಏರಿಯಾಗಳನ್ನು ರಿಸರ್ವ್ ಮಾಡಿದೆ. ಆದರೆ ಇದಕ್ಕೆ ಇನ್ನಷ್ಟು ಏರಿಯಾಗಳನ್ನು ರಿಸರ್ವ್ ಮಾಡಿ ಇದನ್ನು ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರೇ ತೆಗೆದುಕೊಂಡು ಮಾಡಬೇಕು ಅನ್ನುವ ಒಂದು ತೀರ್ಮಾನಕ್ಕೆ ಸರ್ಕಾರದ ಮನಸ್ಸಿನಲ್ಲಿ ಬಂದಿದೆ ಅನ್ನುವ ಮಾತನ್ನು ಹೇಳುತ್ತೇನೆ. ಮತ್ತು ಇದರಲ್ಲಿ ಅರಣ್ಯ ನಷ್ಟವಾಗಿದೆ ಅನ್ನುವುದನ್ನು ಒಪ್ಪುತ್ತೇನೆ. ಇದಕ್ಕೆ ೪೩ ಸಾವಿರ ರೂಪಾಯಿಗಳ ನಷ್ಟವಾಗಿದ್ದುದನ್ನು ನಾವು ವಸೂಲ್ಮಾಡಿದ್ದೇವೆ.

ಇನ್ನು ಮೂರನೆಯದಾಗಿ ಬಂಡೆ ಉರುಳಿಸುವಾಗ ಅದು ಕೆಳಗಡೆ ಬೀಳುವಾಗ ಮಣ್ಣು ಕೊಚ್ಚಿಕೊಂಡು ಹೋಗಿ ಜಮೀನಿನ ಮೇಲೆ ಬೀಳುತ್ತದೆ ಎನ್ನುವ ಮಾತನ್ನು ಹೇಳಿದರು. ಸಾಮಾನ್ಯವಾಗಿ ಬಂಡೆ ಉರುಳಿಸುವಾಗ ಸ್ವಲ್ಪ ಮಟ್ಟಿಗೆ ಮಣ್ಣು ಕೊಚ್ಚಿಕೊಂಡು ಹೋಗುವುದು ನಿಜ.

ಅದನ್ನು ತಡೆಗಟ್ಟುವುದಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೊ ಅದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದಾಗ ಸ್ವಾಭಾವಿಕವಾಗಿ ಕಲ್ಲು ತೆಗೆಯುವಾಗ ಮಣ್ಣು ಬರುತ್ತಿದ್ದುದರಿಂದ, ಅದನ್ನು ನಿಲ್ಲಿಸುವುದು ಕಷ್ಟಸಾಧ್ಯವೆಂದು ನನ್ನ ಅಭಿಪ್ರಾಯಕ್ಕೆ ಬಂದಿದೆ. ಇದಕ್ಕೆ ಜಪಾನಿನಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಇದೆ ಎನ್ನುವುದು ಸನಗಷ್ಟು ಗೊತ್ತಿಲ್ಲ. ಈಗ ೧೦ ರೂಪಾಯಿ ರಾಯಲ್ಟಿಯನ್ನು ೫೦ ರೂಪಾಯಿಗಳಿಗೆ ಏರಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಸರ್ಕಾರದಿಂದ ಮಂಜೂರಾತಿ ಬಂದರೆ, ರಾಯಲ್ಟಿ ಆದಾಯ ಒಂದಕ್ಕೆಂಟ ಏರಲಿಷ್ಟಾಗುತ್ತದೆ. ಇದನ್ನು ರಾಷ್ಟ್ರೀಕರಣ ಮಾಡಿ ಸಂಪೂರ್ಣವಾಗಿ ತೆಗೆದುಕೊಳ್ಳುವವರೆಗೆ; ಈಗ ಯಾವ ಯಾವ ಕಡೆಗೆ ಇದನ್ನು ಕೊಡಬೇಕೆಂದು ಸರ್ಕಾರಕ್ಕೆ ತೋಚುತ್ತದೆ ಅಂತ ಕಡೆಗಳಿಗೆ ಕಾನೂನಿಗನುಸಾರವಾಗಿ ಕೊಡುತ್ತಿರುವುದು ನಡೆದುಬಂದಿದೆ. ಈ ವಿಚಾರವಾಗಿ ಹೆಚ್ಚು ಆಲೋಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

೨-೩೦ ಪಿ. ಎಂ.

Matters under Rule 312

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರ ನೋಟೀಸು ಮುಖ್ಯ ಮಂತ್ರಿಗಳು ಇಂದು ಸಭೆಗೆ ಬಂದಿಲ್ಲ ಆದ್ದರಿಂದ ಅವರು ಬಂದಮೇಲೆ ನಾಳೆ ಅಥವಾ ನಾಳಿದ್ದು ಅವರ ನೋಟೀಸಿನ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಗಬಹುದು.

(i) *re: non Conducting the Kannada Examination by the K.P.S.C.*

† ಶ್ರೀಮತಿ ಎಸ್. ಪ್ರಮಿಳಾ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಲೋಕ ಸೇವಾ ಆಯೋಗದಲ್ಲಿ ಇದುವರೆಗೂ ಕೆನ್ನಡದಲ್ಲಿ ಪರೀಕ್ಷೆಗಳನ್ನು ಮಾಡುವುದಕ್ಕೆ ಅವಕಾಶ ಕೊಡದೆ ಇರುವುದರ ಬಗ್ಗೆ ನಾನು ಮಾನ್ಯ ಸಚಿವರ ಗಮನ ಸೆಳೆಯುತ್ತೇನೆ. ೧೯೬೮ನೇ ಇಸವಿಯಲ್ಲಿ, ಅವರವರ ರಾಜ್ಯದ ರಾಜ್ಯಭಾಷೆಗಳಲ್ಲಿ ಲೋಕಸೇವಾಆಯೋಗದ ಪರೀಕ್ಷೆಗಳನ್ನು ನಡೆಸಬೇಕೆಂದು ಸಂಸತ್ತಿನಲ್ಲಿ ನಿರ್ಣಯ ಮಾಡಲಾಗಿದೆ. ಈಗ್ಗೆ ಎರಡು ವರ್ಷಗಳ ಹಿಂದೆ ನಡೆದ ಪ್ರಾದೇಶಿಕಾ ಭಾಷಾ ಸಮ್ಮೇಳನದಲ್ಲಿ ರಾಜ್ಯದ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲಿ ನಡೆಸಲು ಅವಕಾಶ ಮಾಡಿ ಕೊಡಬೇಕೆಂದು ನಿರ್ಣಯ ಮಾಡಲಾಗಿದೆ. ನಂತರ, ರಾಜ್ಯ ಸರ್ಕಾರದವರು ಲೋಕಸೇವಾ ಆಯೋಗದವರಿಗೆ ಪತ್ರ ಬರೆದು, ಕನ್ನಡ ಭಾಷೆಯಲ್ಲಿ ಪರೀಕ್ಷೆಗಳನ್ನು ನಡೆಸುವ ಸಲುವಾಗಿ ಸೂಕ್ತ ತಿದ್ದುಪಡಿಗಳನ್ನು ಮಾಡಿಕೊಳ್ಳಬೇಕೆಂದು ತಿಳಿಸಿದ್ದರು ಆಗ ಲೋಕ ಸೇವಾ ಆಯೋಗದವರು ರಾಜ್ಯದ ಮೂರು ವಿಶ್ವವಿದ್ಯಾನಿಲಯಗಳಿಗೆ ಕಾಗದ ಬರೆದು, ನಾವು ಕನ್ನಡದಲ್ಲಿ ಪರೀಕ್ಷೆಗಳನ್ನು ಮಾಡುವುದಾದರೆ, ತಾವು ಪರೀಕ್ಷಕ ಮೌಲ್ಯ ಮಾಪಕರನ್ನು ಕಳುಹಿಸುವಿರಾ ಎಂದು ಕೇಳಿದಾಗ, ವಿಶ್ವವಿದ್ಯಾನಿಲಯಗಳವರು ಅದಕ್ಕೆ ಒಪ್ಪಿ, ಇಪರಿಗೆ ಕಾಗದವನ್ನೂ ಬರೆದಿದ್ದಾರೆ. ಮಾರ್ಚಿ ತಿಂಗಳಲ್ಲಿ ನವದೆಹಲಿಯಲ್ಲಿ ನಡೆದ